## ಕಾರ್ಮಿಕ ನ್ಯಾಯಾಲಯ, ಮೈಸೂರು.

**Ref**: 09/2022

ಡಬ್ಲೂ. ಡಬ್ಲ್ಯೂ-1

**ದಿನಾಂಕ 11.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಪರವಾಗಿ ಶ್ರೀ ಎ.ಸಿ.ಎನ್. ವಕೀಲರಿಂದಃ**

ನಾನು ಈಗ ಪದಾಧಿಕಾರಿಯಲ್ಲ, ಸಂಘದ ಸದಸ್ಯನಾಗಿರುತ್ತೇನೆ. 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಲೇಆಫ ಹಾಗೂ ರಿಟ್ರೆಂಚ್‌ಮೆಂಟ್ ಆದಾಗ ನಾನು ಸಂಘದ ಅಧ್ಯಕ್ಷನಾಗಿದ್ದೆ. 2018 ನೇ ಇಸವಿಯಲ್ಲಿ ಲೇಆಫ್ ಹಾಗೂ ರಿಟ್ರೆಂಚ್‌ಮೆಂಟ್ ಮಾಡುವುದಕ್ಕೆ ಕಾರ್ಮಿಕ ಇಲಾಖೆಯ ಅನುಮತಿಯನ್ನು ಕೋರಿ 2 ನೇ ಪಕ್ಷಗಾರ ಸಂಸ್ಥೆಯವರು ಅನುಮತಿ ಕೋರಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಗೆ ಸಂಘದವರು ತಕರಾರನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ಆಗ ಸರ್ಕಾರದವರು ಆಡಳಿತ ಮಂಡಳಿಯವರು ನೀಡಿದ್ದ ಅರ್ಜಿಯನ್ನು ವಜಾ ಮಾಡಿದ್ದರು ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. 2 ನೇ ಪಕ್ಷಗಾರರ ಸಂಸ್ಥೆಯವರು ಸೇವಾ ಹಿರಿತನದ ಜೇಷ್ಠತೆಯ ಪಟ್ಟಿಯನ್ನು ನೊಟೀಸ್ ಬೋರ್ಡನಲ್ಲಿ ಪ್ರಕಟಿಸಿದ್ದರು ಎಂದರೆ ಸಾಕ್ಷಿ ಗೇಟ್‌ನಲ್ಲಿ ಹಾಕಿದ್ದರು ಎಂದು ಉತ್ತರಿಸಿರುತ್ತಾರೆ. ಸದರಿ ಜೇಷ್ಠತೆಯ ಪಟ್ಟಿಗೆ ಸಂಬಂಧಪಟ್ಟಂತೆ ಆಡಳಿತ ವರ್ಗಕ್ಕೆ ನಾನು ಯಾವುದೇ ತಕರಾರು ಮಾಡಿದ್ದೇನಾ ಎಂದರೆ ಸಾಕ್ಷಿ ತಕರಾರು ಕೊಟ್ಟಿದ್ದೆ ಎಂದು ಹೇಳುತ್ತಾರೆ. ಆ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ.

ಕೊವೀಡ್ ಸಮಯದಲ್ಲಿ ಎರಡು ತಿಂಗಳು ಕಾಲ ಕಾರ್ಖಾನೆಯಲ್ಲಿ ಯಾವುದೇ ಕೆಲಸಗಳು ನಡೆದಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಲೇಆಫ್ ಘೋಷಣೆ ಮಾಡುವುದಕ್ಕೆ ಮುಂಚೆ ಒಂದು ಗುಂಪಿನ ಕೆಲಸಗಾರರು ರಾಜೀನಾಮೆ ಸಲ್ಲಿಸಿ ರಾಜಿ

ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಆ ರೀತಿ ಅವರು ರಾಜಿ ಮಾಡಿಕೊಂಡು ಹೋದ ಮೇಲೆ ಉಳಿದ ಕಾರ್ಮಿಕರ ಸಂಖ್ಯೆ 100 ಕ್ಕಿಂತ ಕಡಿಮೆ ಇತ್ತು ಎಂದರೆ ಸಾಕ್ಷಿ 100 ಕ್ಕಿಂತ ಹೆಚ್ಚಾಗಿತ್ತು ಎಂದು ಉತ್ತರಿಸಿರುತ್ತಾರೆ. ಸದರಿ 100 ಕ್ಕಿಂತ ಕಡಿಮೆ ಇದ್ದ ಕಾರ್ಮಿಕರಿಗೆ ಸಂಬಂಧಪಟ್ಟಂತೆ ದಿನಾಂಕ 07.07.2020 ರಂದು 2 ನೇ ಪಕ್ಷಗಾರ ಸಂಸ್ಥೆಯವರು ಲೇಆಫ್ ಘೋಷಣೆ ಮಾಡಿದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಅದಾದ ನಂತರ 42 ಜನ ಕಾರ್ಮಿಕರನ್ನು ಸೇವಾ ಜೇಷ್ಠತೆ ಪಟ್ಟಿಯ ಪ್ರಕಾರ ರಿಟ್ರೆಂಚ್ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಸದರಿ 42 ಜನ ಕಾರ್ಮಿಕರನ್ನು ರಿಟ್ರೆಂಚ್ ಮಾಡಿರುವುದು ಸರಿಯಲ್ಲ ಎಂದು ಪ್ರಶ್ನಿಸಿ ಅದು ಔದ್ಯಮಿಕ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಸದರಿ 42 ಜನ ಕಾರ್ಮಿಕರ ಉದ್ಯೋಗ ನಿರಾಕರಿಸಿರುತ್ತಾರೆ ಎಂದು ಹೇಳಿ ಈ ಕಾರ್ಮಿಕ ನ್ಯಾಯಾಲಯದಲ್ಲಿ ಪ್ರಸ್ತುತ ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿ.

ಕೊವೀಡ ಸಮಯದಲ್ಲಿ ಯಾವುದಾದರೂ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿದರೆ ಒಂದು ವರ್ಷದ ಅವಧಿಯ ಸಂಬಳವನ್ನು ಅವರಿಗೆ ನೀಡಬೇಕು ಎಂದು ಇ.ಎಸ್.ಐ. ಇಲಾಖೆಯಿಂದ ಸರ್ಕಾರ ಆದೇಶ ಹೊರಡಿಸಿತ್ತು ಎಂದರೆ ಹೌದು. ಅದರಂತೆ ಕಾರ್ಮಿಕರು ಸದರಿ ಉಪಯೋಗವನ್ನು ಪಡೆದುಕೊಂಡಿರುತ್ತಾರೆ ಎಂದರೆ ಹೌದು. 42 ಜನ ಕಾರ್ಮಿಕರ ಉದ್ಯೋಗ ನಿರಾಕರಣೆ ಬಗ್ಗೆ ಎ.ಎಲ್.ಸಿ.ರವರ ಮುಂದೆ ಪ್ರಕರಣ ಬಾಕಿ ಇದ್ದಾಗ ನಾವು ರಾಜಿ ಮಾಡಿಕೊಂಡಿದ್ದೆವು, ಆ ರಾಜಿ ಪತ್ರಕ್ಕೆ ನಾವು ಸಹಿ ಮಾಡಿದ್ದೆವು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಇ.ಎಸ್.ಐ. ಇಲಾಖೆಯಿಂದ ಉಪಯೋಗವನ್ನು ಪಡೆದುಕೊಳ್ಳುವ ಉದ್ದೇಶದಿಂದ ಎ.ಎಲ್.ಸಿ. ಮುಂದೆ ಇದ್ದ ಪ್ರಕರಣವನ್ನು ಒಂದು ವರ್ಷದವರೆಗೆ ನಾವು ಮುಂದಕ್ಕೆ

ಹಾಕಿಕೊಂಡು ಹೋಗಿದ್ದೆವು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿ, ಎ.ಎಲ್.ಸಿ. ಮುಂದೆ ಸಭೆಗಳು ಹಾಗೂ ಇನ್ನಿತರೆ ಕಾರಣಕ್ಕೆ ವಿಳಂಬ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

ರಿಟ್ರೆಂಚ್ ಮೆಂಟ್ ಆದ ಮೇಲೆ ಕಾರ್ಮಿಕರ ಪಟ್ಟಿಯಲ್ಲಿ ನಾನು ಕಿರಿಯ ಕಾರ್ಮಿಕ ನಾಗಿದ್ದೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸಿ ನಾನು ಹಿರಿಯ ಕಾರ್ಮಿಕನಾಗಿದ್ದೆ ಎಂದು ಹೇಳಿರುತ್ತಾರೆ. ಬೇರೆ ಬೇರೆ ವಿಚಾರಗಳಿಗೆ ಸಂಬಂಧಿಸಿದಂತೆ ಎ.ಎಲ್.ಸಿ.ರವರ ಮುಂದೆ ನಾನು 6-7 ಪ್ರಕರಣಗಳನ್ನು ದಾಖಲು ಮಾಡಿರುತ್ತೇನೆ ಎಂದು ಹೌದು. ನಾನು ಎ.ಎಲ್.ಸಿ.ರವರ ಮುಂದೆ 2 ನೇ ಪಕ್ಷಗಾರ ಸಂಸ್ಥೆಯ ವ್ಯವಸ್ಥಾಪಕರು ಮಹಿಳೆಯರ ಶೌಚಾಲಯಕ್ಕೆ ಭೇಟಿ ನೀಡಿದ್ದಾರೆ ಎಂದು ಆರೋಪಿಸಿ ಪ್ರಕರಣ ದಾಖಲು ಮಾಡಿ ಅವರನ್ನು ಕೆಲಸದಿಂದ ತೆಗೆದು ಹಾಕಬೇಕು ಎಂದು ಕೇಳಿದ್ದೆ ಎಂದರೆ ಸಾಕ್ಷಿ ಅರ್ಜಿ ಸಲ್ಲಿಸಿರುವುದು ನಿಜ ಎಂದು ಉತ್ತರಿಸಿ ಕೆಲಸದಿಂದ ತೆಗೆಯಬೇಕು ಎಂದು ನಾನು ಕೇಳಿರಲಿಲ್ಲ ಎಂದು ಉತ್ತರಿಸಿರುತ್ತಾರೆ. ಶೌಚಾಲಯದ ಮುಂಭಾಗ ಮಹಿಳೆಯರೆಲ್ಲ ಕುಳಿತು ಮಾತನಾಡುತ್ತಿದ್ದುದ್ದನ್ನು ಕಂಡು ಸಂಸ್ಥೆಯ ವ್ಯವಸ್ಥಾಪಕರು ಅದನ್ನು ಪ್ರಶ್ನೆ ಮಾಡಿದ್ದರು, ಆ ಕಾರಣದಿಂದ ನಾನು ಸದರಿ ವಿಷಯದಲ್ಲಿ ಪ್ರವೇಶಿಸಿ ಮುಂಚೂಣಿಯಲ್ಲಿ ನಿಂತು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ನಾನು ಅರ್ಜಿ ಸಲ್ಲಿಸಿಲ್ಲ ಸಂಘದ ವತಿಯಿಂದ ಅರ್ಜಿ ಸಲ್ಲಿಸಿರುತ್ತೇನೆ.

2 ನೇ ಪಕ್ಷಗಾರ ಸಂಸ್ಥೆ ರಫ್ತು ಆಧಾರಿತ ಘಟಕಗಳು (Export Oriented Unit – EOU) ಎಂದರೆ ಹೌದು. ಲೇಆಫ್ ಘೋಷಣೆ ಮಾಡುವುದಕ್ಕಿಂತ ಮುಂಚೆ ವಿದೇಶದವರು ಸಂಸ್ಥೆಗೆ ನೀಡಿದ್ದ ಆದೇಶವನ್ನು ಅವರು ರದ್ದು ಮಾಡಿದ್ದರು ಆದ್ದರಿಂದ ಉತ್ಪಾದನೆ ನಡಾವಳಿ ನಿಂತುಹೋಗಿತ್ತು ಎಂದರೆ ಹೌದು ಎಂದು ಉತ್ತರಿಸಿರುತ್ತಾರೆ. 2 ನೇ ಪಕ್ಷಗಾರರ ಸಂಸ್ಥೆಯವರಿಗೆ ಸಂಬಂಧಿಸಿದಂತೆ ಮೈಸೂರು ಅಥವಾ ರಾಮನಗರದಲ್ಲಿ ಯಾವುದೇ ಘಟಕ ಇಲ್ಲ ಎಂದರೆ ಹೌದು. ನಮ್ಮ ಉತ್ಪಾದನೆ ಬ್ರಾಂಡೆಡ್ ಉತ್ಪಾದನೆ ಆಗಿರುವುದಿಲ್ಲ ಎಂದರೆ ಹೌದು. 2 ನೇ

ಪಕ್ಷಗಾರ ಸಂಸ್ಥೆಯವರು ತಮ್ಮ ಸಂಸ್ಥೆಗೆ ತರೆಸಿಕೊಂಡಿದ್ದ ಕಚ್ಚಾ ವಸ್ತುಗಳನ್ನು ಬೇರೆ ಸಂಸ್ಥೆಗಳಿಗೆ ಮಾರಾಟ ಮಾಡಿದ್ದರು ಎಂದರೆ ಹೌದು ಎಂದು ಉತ್ತರಿಸಿ ಜಾಬ್ ವರ್ಕ ಮಾಡಲು ಯಾವ ಸಂಸ್ಥೆಯವರಿಂದ ಕೇಳಿದ್ದರೋ ಆ ಸಂಸ್ಥೆಗೆ ಕಳುಹಿಸಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಆಡಳಿತ ವರ್ಗದವರು ಸದರಿ ಹಣದಿಂದ ಕೆಲಸಗಾರರಿಗೆ ಸಂಬಳ ನೀಡಲು ಹಾಗೂ ಇತರೆ ವೆಚ್ಚಗಳನ್ನು ಭರಿಸಲು ಉಪಯೋಗ ಮಾಡಿದ್ದರು ಎಂದರೆ ಸರಿಯಲ್ಲ. ಆಡಳಿತ ವರ್ಗದವರಿಗೆ ಉತ್ಪಾದನೆ ಸರಿಯಾಗಿ ಆಗುತ್ತಿಲ್ಲ ಎನ್ನುವ ಕಾರಣಕ್ಕೆ ನಾನು ಅವರ ಸ್ವಲ್ಪ ಜಾಗವನ್ನು ಮಾರಾಟ ಮಾಡಬೇಕು ಎಂದು ಸಲಹೆ ನೀಡಿದ್ದೆ ಎಂದರೆ ಸರಿಯಲ್ಲ.

ನಾನು 2 ನೇ ಪಕ್ಷಗಾರ ಸಂಸ್ಥೆಗೆ ಸಂಬಂಧಪಟ್ಟ ಬ್ಯಾಲೆನ್ಸ ಶೀಟ್ ನ್ನು ನೋಡಿರುವುದಿಲ್ಲ. ಸಂಸ್ಥೆಯ ಲಾಭ ನಷ್ಟದ ಬಗ್ಗೆ ನಾನು ಯಾವುದೇ ಲೆಕ್ಕಪತ್ರಗಳನ್ನು ನೋಡಿರುವುದಿಲ್ಲ. ನಾನು ಅಧ್ಯಕ್ಷನಾಗಿದ್ದಾಗ ಒಂದರ ಮೇಲೆ ಒಂದು ವಿವಾದಗಳನ್ನು ಸೃಷ್ಟಿ ಮಾಡಿ ಯಾವುದೇ ವಿವಾದಗಳು ರಾಜೀಯಾಗಲು ಅವಕಾಶ ಮಾಡಿಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. (ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**